ಶ್ರೀ ಬಿ.ಎ. ಜೀವಿಜಯ : ನಾನು ಇಲ್ಲೇ ಡೆಮಾನ್‌ಸ್ಟೇಟ್ ಮಾಡುತ್ತೇನೆ.

ಮಾನ್ಯ ಸದಸ್ಯರೊಬ್ಬರು : ನಮಗೆಲ್ಲಾ ಗೊತ್ತಾಗಬೇಕು, ನಮ್ಮ ಎದುರಿಗೆ ಮಾಡಿ, ಕ್ಯಾಬಿನ್‌ನಲ್ಲಿ ಮಾಡಿದರೆ ನಮಗೆ ಗೊತ್ತಾಗುವುದಿಲ್ಲ, ರೈತರ ಪ್ರಶ್ನೆ, ಇಡೀ ರಾಜ್ಯಕ್ಕೆ ಗೊತ್ತಾಗಲಿ, ಇಡೀ ರಾಜ್ಯದ ಜನತೆಗೆ ಗೊತ್ತಾಗಬೇಕು, ಇಡೀ ರಾಜ್ಯದಲ್ಲಿ ನಡೆಯುತ್ತಿರುವ ದೊಡ್ಡ ಹಗರ.

(ಗೊಂದಲ)

ಶ್ರೀ ಬಿ.ಎ. ಜೀವಿಜಯ : ಮಾನ್ಯ ಅಧ್ಯಕ್ಷರೆ, ಬರೀ ಗೊಬ್ಬರವಲ್ಲ, ಬೀಜನೂ ಕಳಪೆಯದ್ದು, ವಿತರಣೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ಜೀವಿಜಯರವರೇ, ನಮ್ಮ ಛೇಂಬರ್ ಇದೆಯಲ್ಲಾ ಅಲ್ಲಿ ಬಂದು ಡೆಮಾನ್‌ಸ್ಟೇಟ್ ಮಾಡಿ, ನಾನು ಪ್ರೆಸ್ ಪಿಪಲ್‌ಗು ಬನ್ನಿ ಎಂದು ರಿಕ್ವೆಸ್ಟ್ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು, ಕೃಷಿ ಸಚಿವರು, ವಿರೋಧಪಕ್ಷದ ನಾಯಕರು, ಇತರೇ ನಾಯಕರುಗಳು ಬರಲಿ, ಈಗ ಸದನವನ್ನು ಮೂರು ಗಂಟೆವರೆಗೆ ಮುಂದೂಡಲಾಗಿದೆ.

(ಸದನವು 1.45ಕ್ಕೆ ಮುಂದೂಡಲ್ಪಟ್ಟು ಮತ್ತೆ 3.00 ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 3 ಗಂಟೆ 23 ನಿಮಿಷಕ್ಕೆ ಪ್ರಾರಂಭವಾಯಿತು, ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಪೀಠವನ್ನಲಂಕರಿಸಿದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಸದನದಲ್ಲಿ ಸಚಿವರುಗಳು ಇಲ್ಲದೇ ಇರುವ ಬಗ್ಗೆ.

ಅಧ್ಯಕ್ಷರು : ಮಾಧುಸ್ವಾಮಿಯವರು .....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಯಾರಿದ್ದಾರೆ ಎಂದು ಮಾತನಾಡುವುದು?

ಶ್ರೀ ವಾಟಾಳ್ ನಾಗರಾಜ್ : ಯಾರಿಗೆ ಮಾತನಾಡಬೇಕು?

ಅಧ್ಯಕ್ಷರು : ಇದ್ದಾರಲ್ಲಾ ಆಚಾರ್ಯರವರು, ಬೇರೆಯವರು ಬರುತ್ತಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಬರುತ್ತಾರೆ ಎಂದರೆ ಯಾರಾದರೂ ಉತ್ತರನ್ನು ಮಾದುಸ್ವಾಮಿಯವರು ಮಾತನಾಡಿದ್ದಕ್ಕೆ ಕೊಡಬೆಕಲ್ಲಾ?

ಅಧ್ಯಕ್ಷರು : ಆಯಿತು, ಬರುತ್ತಾರೆ ಹೇಳಿಕಳುಹಿಸಿದ್ದೇನೆ ಆಚಾರ್ಯರವರಿಗೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇಬ್ಬರು ಮಂತ್ರಿಗಳು, ಆರು ಜನ ಶಾಸಕರು ಆಡಳಿತ ಪಕ್ಷದವರು ಇದ್ದಾರೆ. ಯಾರ ಪರವಾಗಿ ನಾವು ಮಾತನಾಡಬೇಕು ಹೇಳಿ.

ಶ್ರೀ ಎ. ಸುನಿಲ್ ಕುಮಾರ್ : ಇಲ್ಲಿ ಇದ್ದೇವೆ.....

ಶ್ರೀ ವಾಟಾಳ್ ನಾಗರಾಜ್ : ಅಲ್ಲಿದ್ದೀರಾ?

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಿಜೆಪಿಯವರೆಲ್ಲಾ ನೈಸ್ ಕಂಪನಿಯ ಪಾರ್ಟಿಗೆ ಹೋಗಿದ್ದಾರೆ. ಅವರ್ಯಾಕೆ ಬರುತ್ತಾರೆ ಇಲ್ಲಿ? ಬಿಜೆಪಿ ಪಾರ್ಟಿಯವರು ನೈಸ್ ಕಂಪನಿ ಪಾರ್ಟಿಗೆ ಹೋಗಿದ್ದಾರೆ. ಆ ನೈಸ್ ಕಂಪನಿಯಪಾರ್ಟಿಗೆ ಬಿಜೆಪಿ ಶಾಸಕರು ಯಾರ್ಯಾರು ಹೋಗಿದ್ದರು ಎಂಬುದನ್ನು ಬಹಿರಂಗ ಪಡಿಸಬೇಕು.

ಅಧ್ಯಕ್ಷರು : ಆಯಿತು, ಮಾತನಾಡಿ ಮಾಧುಸ್ವಾಮಿಯವರೇ, ಡಾ॥ ಆಚಾರ್ಯರವರು ಇದ್ದಾರೆ, ಬೇರೆಯವರು ಬರುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲ ಸಾರ್, ಪಾಪ ಅವರು ಬಿಲ್ ಇಂಟ್ರಡ್ಯೂಸ್ ಮಾಡುವುದಕ್ಕೆ ಬಂದಿದ್ದಾರೆ.

ಅಧ್ಯಕ್ಷರು : ಇಲ್ಲ, ಅವರೂ ಕೂಡ ಹಿರಿಯ ಮಂತ್ರಿಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಈ ವಿಚಾರದ ಬಗ್ಗೆ ಸೋಮವಾರವೇ ಚರ್ಚೆ ಮಾಡಬೇಕಾಗಿದ್ದು, ಇವತ್ತು ತೆಗೆದುಕೊಂಡಿದ್ದೇವೆ. ಏಕೆಂದರೆ ಇಲ್ಲಿ ಮುಖ್ಯಮಂತ್ರಿಗಳು ಇರಬೇಕು, ವಿಷಯ ಅವರ ಮುಂದೆ ಚರ್ಚೆಯಾಗಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇರಬೇಕು. ಅವರ ಮುಂದೆ ಕೂಡ ಚರ್ಚೆಯಾಗಬೇಕು ಎಂದು.

ಅಧ್ಯಕ್ಷರು : ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಗೋಳನ್ನು ಯಾರ ಮುಂದೆ ಹೇಳಿಕೊಳ್ಳುವುದು?

ಅಧ್ಯಕ್ಷರು : ಆಯಿತು, ಬರುತ್ತಾರೆ, ಪ್ರಾರಂಭ ಮಾಡಲಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ರವರು ನಿಮ್ಮ ಮುಂದೆ ಗೋಳು ಹೇಳಿಕೊಳ್ಳುತ್ತಾರೆ. ನೀವು ಯಾರ ಮುಂದೆ ಹೇಳಬೇಕು ಎಂದು ನಿಮಗೆ ತಿಳಿಯದ ಹಾಗೆ ಆಗಿದೆ.

5. ನಿಯಮ 69 ರ ಮೇರೆಗೆ

ವಿಷಯ : ಬಿ.ಎಂ.ಐ.ಸಿ. ಯೋಜನೆ ವಿಚಾರದ ಬಗ್ಗೆ (ಮುಂದುವರೆದ ಚರ್ಚೆ)

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಹೆಚ್ಚುವರಿಯಾಗಿ ಭೂಮಿಯನ್ನು ಕೆ.ಐ.ಎ.ಡಿ.ಬಿ. ಯವರು ಅಕ್ವೈರ್ ಮಾಡಿದ್ದಾರೆ. ಅದನ್ನು ಅನಗತ್ಯವಾಗಿ ನೈಸ್‌ನವರಿಗೆ ಕೊಟ್ಟಿದ್ದಾರೆ ಎಂದು ಹೇಳಿ ಏನು ವಾದ ಮಾಡಿದ್ದೆವು, ಅದನ್ನು ತಮ್ಮ ಗಮನಕ್ಕೆ ತರುತ್ತಾ, ಇದರಲ್ಲಿ ಬಹಳ ಜನ ಶಾಮೀಲಾಗಿದ್ದಾರೆ. ಅದರಲ್ಲೇನೂ ಎರಡು ಮಾತಿದೆ ಎಂದು ಭಾವಿಸುವ ಹಾಗೆ ಇಲ್ಲ. ಅವರ ವಿರುದ್ಧ ಒಂದು ಆ್ಯಕ್ಷನ್ ಆಗಬೇಕೆಂದು ಹೇಳಿ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.